೪೫ ಸಿಂಗಾರಿ ಬಂಗಾರಿ
೪೬ ಹೃದಯ ಸಾಮ್ರಾಜ್ಯ
೪೭ ಅದೃಷ್ಟ ರೇಖೆ
೪೮ ಯಂಗ ಪುರುಷ
೪೯ ಇದು ಸಾಧ್ಯ
೫೦ ಗಂಡು ಗೂಳಿಗಳು
೫೧ ಅವತಾರ ಪುರುಷ
೫೨ ಒಂಟಿ ಸಲಗ
೫೩ ಪರುಶ ರಾಮ
೫೪ ಹೊಸ ಕಾವ್ಯ
೫೫ ಪೋಲಿ ಹುಡುಗ
೫೬ ಪ್ರಜೆಗಳಂ ಪ್ರಭುಗಳು
೫೭ ಗಗನ
೫೮ ಅವಳ ಚರಿತ್ರೆ
೫೯ ಅಗ್ನಿ ದಿವ್ಯ
೬೦ ಲಾ ಪಾಡಿ ನೋಡು
೬೧ ಜೈ ಕರ್ನಾಟಕ
೬೨ ರಾಜ ಯಂವರರಾಜ
೬೩ ಗಜಪತಿ ಗರ್ವಭಂಗ
೬೪ ನರಸಿಂಹ
೬೫ ಪ್ರತಿಫಲ
೬೬ ಪ್ರೇಮಾಗ್ನಿ
೬೭ ಜಯಂಭೇರಿ

೧೯೯೦ನೇ ಜನವರಿಯಿಂದ ೧೯೯೦ನೇ ಮಾರ್ಚಿ ವರೆಗೆ

೧ ಡಾ: ಕೃಷ್ಣ
೨ ಮತ್ಸರ
೩ ಚಪಲ ಚೆನ್ನಿಗರಾಯ
೪ ನಮ್ಮೂರ ಹಮ್ಮೀರ
೫ ರಾಜಸಿಂಹ
೬ ರಣಭೇರಿ
೭ ಸಂತ ಶಿಶುನಾಳ ಷರೀಫ್
೮ ಆಸೆಗೊಬ್ಬ ಮಿಸೆಗೊಬ್ಬ
೯ ಆಜಿಯಲ್ ವಿಜಯಂ
೧೦ ಬಂಗಾರದ ಗೂಳಿ
೧೧ ನಂಬಿದರೆ ನಂಬಿ ಬಿಟ್ಟರೆ ಬಿಡಿ
೧೨ ಎದುರು ಮನೆ ಮೂನ
೧೩ ಈ ಮಣ್ಣಿನ ಸತ್ಯ
೧೪ ಕೆಂಪು ಸೂರ್ಯ
೧೫ ರುದ್ರತಾಂಡವ
೧೬ ಎಸ್.ಪಿ ಸಾಂಗ್ಲಿಯಾನ—2
೧೭ ಕಲಿಯುಗ ಕೃಷ್ಣ
೧೮ ಶಿವಶಂಕರ್
೧೯ ಕಾಡಿನ ವೀರ

## ಗ್ರಾನೈಟ್ ಗಣಿಯನ್ನು ಗುತ್ತಿಗೆಗೆ ನೀಡಿದ ಬಗ್ಗೆ

೩೪೬ ಶ್ರೀ ಷಫಿ ಅಹಮದ್ ಎಸ್. (ತುಮಕೂರು).— ಮಾನ್ಯ ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಟ್ಟಾ ಜಮೀನಿನಲ್ಲಿ, ಸರ್ಕಾರಿ ಜಮೀನಿನಲ್ಲಿ ಮತ್ತು ಅರಣ್ಯ ಜಮೀನಿನಲ್ಲಿ ಮತ್ತು ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್‌ನವರಿಗೆ ನೀಡಿರುವ ಗಣಿ ಗುತ್ತಿಗೆಗಳ ಸಂಖ್ಯೆ ಎಷ್ಟು?

ಆ) ಇದರಿಂದ ಪಸೂಲಾಗಿರುವ ರಾಜಧನ ಎಷ್ಟು? ಮತ್ತು ಇರುವ ಬಾಕಿ ಎಷ್ಟು?

ಇ) ಹಿಂದಿನ ಮೂರು ವರ್ಷಗಳಲ್ಲಿ ರಫ್ತಾಗಿರುವ ಗ್ರಾನೈಟ್ ಪ್ರಮಾಣ ಎಷ್ಟು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಚಿವರು).—

ಅ) ೧. ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕೆಲಸ ಮಾಡುತ್ತಿರುವ ಕಲ್ಲಣಿಗಳ ಸಂಖ್ಯೆ:೧೬೧

೨. ಸರ್ಕಾರಿ ಜಮೀನಿನಲ್ಲಿ ಮೆ: ಮೈಸೂರು ಮಿನರಲ್ಸ್ ಲಿಮಿಟೆಡ್‌ನವರಿಗೆ ಮಂಜೂರಾಗಿರುವ ಕಲ್ಲಣಿ ಗುತ್ತಿಗೆಗಳ ಸಂಖ್ಯೆ: ೭೪.

೩. ಅರಣ್ಯ ಜಮೀನಿನಲ್ಲಿ ನೀಡಿರುವ ಕೆಲ್ಲಣಿಗಳ ಸಂಖ್ಯೆ: ಇಲ್ಲ.

ಆ) ೧ ೧೯೮೬ರಿಂದ ೧೯೮೮ರ ವರೆಗೆ ಮೇಮೈಸೂರು ಮಿನರಲ್ಸ್ ಲಿಮಿಟೆಡ್‌ನವರಿಂದ ವಸೂಲಾಯವಾಗಿರುವ ರಾಜಧನ ರೂ. ೧೨.೪೪.೦೦೦ ರೂ ೫೦.೦೦೦ ಬಾಕಿ ಇದೆ.

೨ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಪಟ್ಟಾ ಜಮೀನಿನಲ್ಲಿ ಕಲ್ಲಣಿ ಕೆಲಸ ಮಾಡುತ್ತಿರುವ ಪಟ್ಟಾದಾರರಿಗೆ ರಾಜಧನವನ್ನು ಪಾವತಿ ಮಾಡುವಂತೆ ನೋಟೀಸು ಗಳನ್ನು ಜಾರಿ ಮಾಡಿದೆ.

ಸ) ಕಳಕಂಡಂತೆ ಗ್ರಾನೈಟ್ ಶಿಲೆಗಳನ್ನು ಮಂಗಳೂರು ಬಂದರಿನಿಂದ ರಫ್ತು ಮಾಡಲಾಗಿದೆ.

| | |
|---|---|
| ೧೯೮೫–೮೬ | ೨,೪೬,೫೦೦ ಟನ್ |
| ೧೯೮೬–೮೭ | ೩,೧೬,೦೦೦ ಟನ್ |
| ೧೯೮೭–೮೮ | ೩,೭೭,೦೦೦ ಟನ್ |

(ಇದರಲ್ಲಿ ತಮಿಳುನಾಡು ಮತ್ತು ಆಂಧ್ರ ಪ್ರದೇಶದಿಂದ ಮಂಗಳೂರು ಬಂದರಿನ ಮೂಲಕ ರಫ್ತಾಗಿರುವ ಪ್ರಮಾಣವೂ ಸೇರಿದೆ).

## ರಾಜ್ಯದಲ್ಲಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಪೂರೈಕೆ

೧೦೭. ಶ್ರೀ ಎ. ಕೃಷ್ಣಪ್ಪ. (ವರ್ತೂರು).— ಮಾನ್ಯ ಕೈಗಾರಿಕೆ ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ನೀಡಬೇಕೆಂದು ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು?

ಆ) ಆ ಪೈಕಿ ಮಾರ್ಚ್ ೧೯೯೦ರ ಕೊನೆಯವರಿಗೆ ಎಷ್ಟು ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿದೆ,

ಇ) ಉಳಿದವರಿಗೆ ಮಂಜೂರಾತಿ ನೀಡದಿರಲು ಕಾರಣವೇನು?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು)

ಅ) ಮಾರ್ಚ್ ೯೦ರ ಅಂತ್ಯದವರೆಗೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ೬೨,೨೪೪ ಅರ್ಜಿಗಳು (ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಸಂಪರ್ಕಕ್ಕಾಗಿ) ಬಂದಿದ್ದವು.

ಆ) ಆ ಪೈಕಿ ಮಾರ್ಚ್ ೯೦ರ ಅಂತ್ಯದವರೆಗೆ ೪೭,೨೬೮ ಅರ್ಜಿಗಳಿಗೆವ ಮಂಜೂರಾತಿ ನೀಡಲಾಗಿದೆ.

ಇ) ಬಾಕಿ ಉಳಿದ ೧೪,೯೭೬ ಅರ್ಜಿಗಳಿಗೆ ಮಂಜೂರಾತಿ ನೀಡದಿರಲು ಮುಖ್ಯ ಕಾರಣಗಳು

೧) ಕೆಲವು ಅರ್ಜಿಗಳು ಮಂಡಳಿಯ ಕಛೇರಿಯಲ್ಲಿ ಇತ್ತೀಚೆಗೆ ನೋಂದಾಯಿಂತವಾಗಿದ್ದು, ವಿದ್ಯುತ್ ಸಂಪರ್ಕದ ಸಾಧ್ಯತೆ ಬಗ್ಗೆ ಸ್ಥಳ ಪರಿಶೀಲನೆಯಂ ಹಂತದಲ್ಲಿವೆ.

೨) ಹಲವು ಅರ್ಜಿಗಳು, ಸ್ಥಳ ಪರಿಶೀಲನೆ ಮಾಡಿದ ನಂತರ ಅಂದಾಜು ಪಟ್ಟಿಯು ತಯಾರಿಕೆ ಹಂತದಲ್ಲಿವೆ.

೩) ಹಲವು ಅರ್ಜಿಗಳು, ಅಂದಾಜು ಪಟ್ಟಿ ತಯಾರಿಕೆ ನಂತರ ಮಂಜೂರಾತಿಗಾಗಿ ಉಪ ವಿಭಾಗ, ವಿಭಾಗ ವೃತ್ತ ಮತ್ತು ವಲಯ ಕಛೇರಿಗಳ ಪರಿಶೀಲನೆಯಲ್ಲಿವೆ.

## ವರದಿಗಳನ್ನು ಒಪ್ಪಿಸುವುದು

ಉಪಾಧ್ಯಕ್ಷರು.— ಮಾನ್ಯ ಅಧ್ಯಕ್ಷರೇ ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೊದಲನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ

ಶ್ರೀ ಕೆ. ಕುಶಾಲ — ಮಾನ್ಯ ಅಧ್ಯಕ್ಷರೇ ಈ ಸದನವು ವರದಿಯನ್ನು ಒಪ್ಪುವುತ್ತದೆ ಎಂದು ನಾನು ಸೂಚಿಸುತ್ತೇನೆ.

ಅಧ್ಯಕ್ಷರು.— ಒಪ್ಪಿಸಲಾಯಿತು.

## ಮೈಸೂರಿನಲ್ಲಿ ನಡೆದ ಗಲಭೆಯ ಬಗ್ಗೆ

† ಶ್ರೀ ಪಿ ಜಿ.ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ ಒಂದು ವಿಚಾರವನ್ನು ನಾನು ತಮ್ಮ ಪರವಾನಗಿಯನ್ನು ಪಡೆದು ಸರ್ಕಾರದಿಂದ ಉತ್ತರವನ್ನು ನಿರೀಕ್ಷೆ ಮಾಡಿದ್ದೆ. ಮಾನ್ಯ ಸಭಾ ನಾಯಕರು ಇಪ್ಪತ್ತು ದಿವಸಗಳಲ್ಲಿ ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ಪ್ರಕಟ ಆಗಿದೆ. ಆದ್ದರಿಂದ ಈ

† ಈ ಚಿಹ್ನೆ ಸಂಬಂಧಪಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.